C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 166/2020**

**ಪ್ರಾಸಾ. 3 ಚಾಸಾ. 4**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮೂರ್ತಿ |
| **ತಂದೆಯ ಹೆಸರು** | : | ನಾರಾಯಣಪ್ಪ |
| **ವಯಸ್ಸು** | : | 42 ವರ್ಷಗಳು |
| **ಉದ್ಯೋಗ** | : | ಆಟೋ ಚಾಲಕ |
| **ವಾಸ** | : | ಗಿರಿನಗರ, ಅವಲಹಳ್ಳಿ, ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 03.11.2025**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಆರೋಪಿ ರವಿಕುಮಾರ್ ನನಗೆ ಗೊತ್ತು. ಆತನನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿವಸ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು ಮತ್ತು ಆರೋಪಿಯ ಗುರುತಿಸುವಿಕೆಗೆ ತಮ್ಮದು ಅಭ್ಯಂತರ ಇಲ್ಲವೆಂದು ಹೇಳಿರುತ್ತಾರೆ.) ಪ್ರಾಸಾ-1 ಚಿನ್ನಮ್ಮ ನನಗೆ ಚಿಕ್ಕಮ್ಮನಾಗಬೇಕು. ಅವರಿಗೆ ಇಬ್ಬರು ಮಕ್ಕಳು. ಮಗನ ಹೆಸರು ಕೆಂಪರಾಜು. ಮಗಳ ಹೆಸರು ಗೌರಮ್ಮ.

2. ಗೌರಮ್ಮನ ಮದುವೆಯು ಆರೋಪಿ ರವಿಕುಮಾರ್ ನೊಂದಿಗೆ 2016 ರಲ್ಲಿ ಆಗಿರುತ್ತದೆ. ಅವರು ವಿವಾಹವಾದ ನಂತರ ಕಗ್ಗಲೀಪುರದ ನವಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅವರಿಬ್ಬರು ಸ್ವಲ್ಪ ದಿನಗಳ ಕಾಲ ಮದುವೆ ಆದ ಮೇಲೆ ಚೆನ್ನಾಗಿ ಇದ್ದರು. ಆ ನಂತರ ಅವರಿಬ್ಬರ ನಡುವೆ ಜಗಳ ಆಗುತ್ತಿತ್ತು. ಜಗಳ ಆದಾಗ ಆಕೆ ನಮ್ಮ ಊರಿಗೆ ಬರುತ್ತಿದ್ದಳು. ಆರೋಪಿ ರವಿಕುಮಾರ್ ನು ಆಕೆಗೆ

ಹಣಕ್ಕಾಗಿ ಒತ್ತಾಯಿಸುತ್ತಿದ್ದು, ಸಂಘದಿಂದ ಹಣ ತೆಗೆದುಕೊಂಡು ಬಾ ಎಂದು ಕೇಳುತ್ತಿದ್ದ ಕಾರಣ ಜಗಳವಾಗುತ್ತಿತ್ತು ಎಂದು ಆಕೆಯ ತಾಯಿ ಚಿನ್ನಮ್ಮನವರ ಮುಖಾಂತರ ಗೊತ್ತಾಗುತಿತ್ತು. ರವಿಕುಮಾರ್ ನ ಪತ್ನಿ ಗೌರಮ್ಮ ಈಗ ಬದುಕಿಲ್ಲ. ಆಕೆ ದಿನಾಂಕ 10.09.2020 ರಂದು ತೀರಿಕೊಂಡಿರುತ್ತಾಳೆ. ಪ್ರಾಸಾ-1 ಚಿನ್ನಮ್ಮ ರವರಿಗೆ ಆರೋಪಿ ರವಿಕುಮಾರ್ ದೂರವಾಣಿ ಕರೆ ಮಾಡಿ ಗೌರಮ್ಮ ನೇಣು ಹಾಕಿಕೊಂಡು ಸತ್ತು ಹೋಗಿರುವುದಾಗಿ ತಿಳಿಸಿರುತ್ತಾನೆ ಎಂದು ಚಿನ್ನಮ್ಮನೇ ನಮಗೆ ತಿಳಿಸಿರುತ್ತಾರೆ. ವಿಚಾರ ತಿಳಿದು ನಾನು ಗೌರಮ್ಮ ವಾಸವಿದ್ದ ಕಗ್ಗಲೀಪುರದ ಬಳಿಯ ಮನೆಗೆ ನಾನು ಹೋದೆನು. ಅಲ್ಲಿ ನಮ್ಮ ಊರಿನ ಬಹಳಷ್ಟು ಜನ ಹಾಗೂ ಗೌರಮ್ಮನ ಕುಟುಂಬದವರು ಬಂದಿದ್ದರು. ನಾನು ನೋಡಿದಾಗ ಫ್ಯಾನ್ ಗೆ ಗೌರಮ್ಮಳ ದೇಹ ನೇಣು ಬಿಗಿದುಕೊಂಡ ಹಾಗೆ ಕಂಡು ಬರುತ್ತಿತ್ತು. ದೇಹದ ಕಾಲುಗಳು ನೆಲದ ಮೇಲೆ ಪೂರ್ತಿ ಇತ್ತು. ಆಕೆ ನೇಣು ಹಾಕಿಕೊಳ್ಳುವ ವ್ಯಕ್ತಿಯಲ್ಲ, ಅವಳನ್ನು ಹೊಡೆದು ಕೊಲೆ ಮಾಡಿ ಆ ರೀತಿ ನೇಣು ಹಾಕಿರುವಂತೆ ಕಂಡು ಬರುತ್ತಿತ್ತು. ಅಲ್ಲಿಂದ ನಾವೆಲ್ಲರೂ ಪೊಲೀಸ್ ಠಾಣೆಗೆ ಹೋದೆವು. ನನ್ನ ಚಿಕ್ಕಮ್ಮ ಚಿನ್ನಮ್ಮರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ಗೌರಮ್ಮಳ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋಗಿರುತ್ತಾರೆ. ಅಲ್ಲಿಗೆ ನನ್ನನ್ನು ಹಾಗೂ ಚಾಸಾ-7 ರಿಂದ 9 ರವರನ್ನು ಪೊಲೀಸರು ಪೋಸ್ಟ್ ಮಾರ್ಟಮ್ ಮಾಡುವ ಸ್ಥಳಕ್ಕೆ ಕರೆಸಿರುತ್ತಾರೆ. ಅಲ್ಲಿ ನಮಗೆ ಗೌರಮ್ಮನ ಮೃತದೇಹವನ್ನು ತೋರಿಸಿರುತ್ತಾರೆ. ನಾವು ದೇಹವನ್ನು ನೋಡಿದಾಗ ಕುತ್ತಿಗೆಯ ಮೇಲೆ ಗುರುತು ಕಂಡು ಬಂದಿರುತ್ತದೆ. ದೇಹದ ಬೇರೆ ಕಡೆ ಗಾಯವಾಗಿತ್ತೋ ಇಲ್ಲವೋ ಎಂಬ ಬಗ್ಗೆ ನಾನು ಗಮನಿಸಿರುವುದಿಲ್ಲ. ಗೌರಮ್ಮನ ದೇಹವನ್ನು ನಾನು ಸಹ ಗುರುತಿಸಿರುತ್ತೇನೆ. ಪೊಲೀಸರು ನಂತರ ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡು, ಅವರು ಬರೆದಿದ್ದ ಬರವಣಿಗೆಗೆ ಸಹಿ ಪಡೆದುಕೊಂಡಿರುತ್ತಾರೆ. ಆಕೆಯ ಮೃತದೇಹವನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿ ನಿಶಾನೆ ಪಿ-8 ಮತ್ತು 9 ರಲ್ಲಿ ಮೃತ ಗೌರಮ್ಮನ ದೇಹವನ್ನು ಗುರುತಿಸುತ್ತಾರೆ. ಸಾಕ್ಷಿ ನಿಶಾನೆ ಪಿ-6 ಮತ್ತು 7 ಭಾವಚಿತ್ರಗಳಲ್ಲಿ ಮೃತ ಗೌರಮ್ಮ, ಆರೋಪಿ ರವಿಕುಮಾರ್ ಹಾಗೂ ಮೃತಳ ತಾಯಿ

ಚಿನ್ನಮ್ಮರವರನ್ನು ಗುರುತಿಸುತ್ತಾರೆ. ಸಾಕ್ಷಿ ನಿಶಾನೆ ಪಿ-3 ಮತ್ತು 4 ರಲ್ಲಿ ಮೃತ ಗೌರಮ್ಮಳ ದೇಹವನ್ನು ಗುರುತಿಸುತ್ತಾರೆ.

<u>ಪಾಟೀ-ಸವಾಲು ಶ್ರೀ ಆರ್.ಆರ್ ವಕೀಲರಿಂದ ಆರೋಪಿಯ ಪರವಾಗಿಃ</u>

ಪೊಲೀಸರು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟಮ್ ಮಾಡುವ ಸಂದರ್ಭದಲ್ಲಿ ತೆಗೆದುಕೊಂಡಿರುತ್ತಾರೆ. ಅಲ್ಲಿಯೇ ನಾನು ಸಹಿ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿನ ಆತನ ಹೇಳಿಕೆಯನ್ನು ತೋರಿಸಿ ಅದರಲ್ಲಿ ಆತನ ಸಹಿ ಇಲ್ಲದಿರುವ ಬಗ್ಗೆ ಕೇಳಲಾಗಿ ಸಹಿ ಇಲ್ಲ ಎಂದು ಒಪ್ಪುತ್ತಾರೆ. ನಿಶಾನೆ ಪಿ-8 ಮತ್ತು 9 ರಲ್ಲಿ ನಾನು ಕಂಡು ಬರುವುದಿಲ್ಲ ಎಂದರೆ ಸರಿ. ಆರೋಪಿ ರವಿಕುಮಾರ ಹಾಗೂ ಮೃತೆ ಗೌರಮ್ಮಳ ವಿವಾಹ ಪ್ರೇಮ ವಿವಾಹ ಎಂದರೆ ಸರಿಯಲ್ಲ. ಅವರ ವಿವಾಹ ದೇವಸ್ಥಾನದಲ್ಲಿ ನೆರವೇರಿರುತ್ತದೆ ಎಂದರೆ ಸರಿ. ಆ ವಿವಾಹಕ್ಕೆ ಹುಡುಗನ ಕಡೆಯಿಂದ ಯಾರು ಹೋಗಿರುವುದಿಲ್ಲ ಮತ್ತು ಹುಡುಗಿ ಕಡೆಯಿಂದ ಪ್ರಾಸಾ-1 ಚಿನ್ನಮ್ಮ ಬಿಟ್ಟು ಹುಡುಗಿಯ ತಂದೆ ಮತ್ತು ಸಹೋದರ ಹೋಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮನ್ನು ವಿವಾಹಕ್ಕೆ ಕರೆದಿದ್ದರೇ ಎಂದರೆ ಸಾಕ್ಷಿ ನಮಗೆ ಯಾರಿಗೂ ವಿವಾಹ ಒಪ್ಪಿಗೆ ಇರುವುದಿಲ್ಲ ಹಾಗೂ ನಾವು ಯಾರು ವಿವಾಹಕ್ಕೆ ಹೋಗಿರುವುದಿಲ್ಲ ಎಂದು ಹೇಳುತ್ತಾರೆ. ಯಾವ ಕಾರಣಕ್ಕೆ ನಿಮಗೆಲ್ಲರಿಗೆ ಒಪ್ಪಿಗೆ ಇರಲಿಲ್ಲ ಎಂದು ಕೇಳಲಾಗಿ ಸಾಕ್ಷಿ ಊರಿನಲ್ಲಿ ಹುಡುಗನ ಬಗ್ಗೆ ವಿಚಾರಿಸಿದಾಗ ಆತನ ನಡುವಳಿಕೆ ಸರಿಯಿರುವುದಿಲ್ಲ, ಆತನು ಈ ಮೊದಲೇ ವಿವಾಹವಾಗಿದ್ದು ಆತನ ಪತ್ನಿ ಜೊತೆಯಲ್ಲಿಲ್ಲ, ಆರೋಪಿತನ ಕಿರುಕುಳ ತಾಳದೆ ಹೊರಟು ಹೋಗಿರುತ್ತಾಳೆ ಎಂದು ತಿಳಿಸಿದ ಕಾರಣ ನಮಗೆ ವಿವಾಹ ಒಪ್ಪಿ ಗೆ ಇರುವುದಿಲ್ಲ. ಸಾಕ್ಷಿ ಸ್ವತಃ ಮುಂದುವರೆದು, ನನ್ನ ಚಿಕ್ಕಮ್ಮ ಪ್ರಾಸಾ-1 ರವರ ಕುಡಿತದ ಚಟವನ್ನು ದುರುಪಯೋಗಪಡಿಸಿಕೊಂಡು, ಆರೋಪಿ ಮತ್ತು ಆತನ ಮನೆಯವನ್ನು ಗೌರಮ್ಮನನ್ನು ವಿವಾಹ ಮಾಡಿರುತ್ತಾರೆ. ಆರೋಪಿ ತಾಯಿಗೂ ಗೌರಮ್ಮ ವಿವಾಹವಾದ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-6 ಮತ್ತು 7 ಭಾವಚಿತ್ರಗಳಲ್ಲಿ ಆರೋಪಿ, ಮೃತೆ ಗೌರಮ್ಮ ಹಾಗೂ ಗೌರಮ್ಮನ ತಾಯಿ ಚಿನ್ನಮ್ಮ ಬಿಟ್ಟು ಬೇರೆ ಯಾರು ಕಂಡು ಬರುತ್ತಿಲ್ಲ

ಎಂದರೆ ಸರಿ. ಮೃತೆ ಗೌರಮ್ಮ ಹಾಗೂ ಆರೋಪಿ ರವಿಕುಮಾರ ನ ಮದುವೆಗೆ ಯಾರ್ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ.

ಕಗ್ಗಲೀಪುರದಲ್ಲಿ ಆರೋಪಿ ರವಿಕುಮಾರನ ಸ್ವಂತ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಮೃತೆ ಗೌರಮ್ಮಳ ವಿವಾಹವನ್ನು ಆರೋಪಿತನೊಂದಿಗೆ ಮೃತಳ ತಾಯಿ ಚಿನ್ನಮ್ಮಳೇ ಮುಂದೆ ನಿಂತು ವಿವಾಹ ಮಾಡಿಸಿರುತ್ತಾಳೆ, ಆದ ಕಾರಣ ನಿಶಾನೆ ಪಿ-6 ಮತ್ತು 7 ರಲ್ಲಿ ಚಿನ್ನಮ್ಮ ಮಾತ್ರ ಕಂಡು ಬರುತ್ತಾಳೆ ಎಂದರೆ ಸಾಕ್ಷಿ ಚಿನ್ನಮ್ಮ ತಾನು, ತನ್ನ ಮಗಳು ಗೌರಮ್ಮ , ಹುಡುಗಿ ತೋರಿಸಿದ ಬ್ರೋಕರ್ ಹಾಗೂ ಇನ್ನೊಂದೆರಡು ಜನ ಇದ್ದ ಬಗ್ಗೆ ಚಿನ್ನಮ್ಮ ಹೇಳಿರುತ್ತಾಳೆ ಎಂದು ಹೇಳುತ್ತಾರೆ. ಚಿನ್ನಮ್ಮಳ ಮಗ ಕೂಲಿ ಕೆಲಸ ಮಾಡಿಕೊಂಡು ತಂದೆ ತಾಯಿಯನ್ನು ಸಾಕಿಕೊಂಡಿದ್ದಾನೆ ಎಂದರೆ ಸರಿ. ಚಿನ್ನಮ್ಮಳ ಗಂಡ ಸಹ ಕೂಲಿ ಕೆಲಸ ಮಾಡುತ್ತಾರೆ. ಆರೋಪಿ ರವಿಕುಮಾರನ ಅತ್ತೆ-ಮಾವ ಕುಡಿತದ ಚಟವನ್ನು ಹೊಂದಿರುತ್ತಾರೆ ಎಂದರೆ ಸರಿ. ಆರೋಪಿ ರವಿಕುಮಾರ ಕಾರು ಚಾಲನೆ ವೃತ್ತಿ ಮಾಡಿಕೊಂಡಿದ್ದ. ಆತನ ಬಳಿ ಸ್ವಂತ ಕಾರು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ರವಿ ಕುಮಾರ ಯಾವಾಗಲಾದರು ಊರಿಗೆ ಬಂದು ಮಾತನಾಡಿಸಿರುತ್ತಾನೆ. ಹೆಚ್ಚು ಮಾತನಾಡಿಸಿರುವುದಿಲ್ಲ. ಮೃತೆ ಗೌರಮ್ಮಳು ಆಕೆ ವಿವಾಹವಾದ 3-4 ವರ್ಷಗಳ ನಂತರ ತೀರಿಕೊಂಡಿರುತ್ತಾಳೆ. ಅವರಿಗೆ ಮಕ್ಕಳು ಇರುವುದಿಲ್ಲ. ಮದುವೆ ಸಂದರ್ಭದಲ್ಲಿ ಗೌರಮ್ಮ ಸಣ್ಣಕ್ಕಿದ್ದಳು ಎಂದು ನಿಶಾನೆ ಪಿ-6 ಮತ್ತು 7 ಭಾವಚಿತ್ರ ತೋರಿಸಿ ಕೇಳಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ನಿಶಾನೆ ಪಿ-3 ಮತ್ತು 4 ಭಾವಚಿತ್ರಗಳನ್ನು ತೋರಿಸಿ ಗೌರಮ್ಮ ಮದುವೆ ನಂತರ ದಪ್ಪವಾಗಿದ್ದಳು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಗೌರಮ್ಮ ಊರಿಗೆ ಬಂದಾಗ ಮಾತನಾಡಿಸುತ್ತಿದ್ದಳು. ಆಕೆಗೆ ಮಕ್ಕಳಾಗಿರುವುದಿಲ್ಲರುವ ಬಗ್ಗೆ ನಾನೇನು ವಿಚಾರಿಸಿರುವುದಿಲ್ಲ. ಗೌರಮ್ಮಳು ಮಕ್ಕಳಾಗುವ ಸಂಬಂಧ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ನನಗೇನು ಮಾಹಿತಿ ಇರುವುದಿಲ್ಲ. ಗೌರಮ್ಮಳು ತನಗೆ ಮಕ್ಕಳಾಗಲಿಲ್ಲ, ಚಿಕಿತ್ಸೆ ಪಡೆದರು ಉಪಯೋಗವಾಗಲಿಲ್ಲ ಎಂದು ಮನಸ್ಸಿಗೆ ನೋವು ಮಾಡಿಕೊಂಡು ಸ್ವತಃ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ, ಈ ವಿಷಯ ನನಗೂ ಸಹ ತಿಳಿದಿದೆ

ಎಂದರೆ ಸರಿಯಲ್ಲ. ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಸಹ ಆಸ್ಪತ್ರೆಯಲ್ಲಿ ಆಕೆ ನೇಣು ಬಿಗಿದುಕೊಂಡು ಮರಣ ಹೊಂದಿರುತ್ತಾಳೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆದಾಗ್ಯೂ ಸಹ ಆರೋಪಿ ಗೌರಮ್ಮಳ ಸಾವಿಗೆ ಕಾರಣವಲ್ಲದೇ ಇದ್ದರು ಸಹ, ಆತನೊಂದಿಗೆ ಗೌರಮ್ಮ ನಮ್ಮ ಕುಟುಂಬದವರ ಇಚ್ಛೆಗೆ ವಿರುದ್ದವಾಗಿ ವಿವಾಹವಾದ ಕಾರಣ, ಅವನ ಮೇಲಿನ ದ್ವೇಷದಿಂದ ಆತ ಕೊಲೆ ಮಾಡಿ ನೇಣು ಬಿಗಿದಿರುತ್ತಾನೆ ಎಂದು ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿ ರವಿಕುಮಾರ ಸ್ಥಳದಲ್ಲಿ ಇರಲಿಲ್ಲ. ಪೊಲೀಸರು ಸಹ ಸ್ಥಳದಲ್ಲಿ ಇರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಬೆಳಗಿನ ಸುಮಾರು 10.30 ಗಂಟೆ ಆಗಿರುತ್ತದೆ. ಆರೋಪಿ ರವಿಕುಮಾರನಿಗೂ ಮೃತಳ ಸಾವಿಗೂ ಯಾವುದೇ ಪ್ರತ್ಯಕ್ಷ ಹಾಗೂ ಪರೋಕ್ಷ ಸಂಬಂಧ ಇಲ್ಲದೇ ಇದ್ದರು ಆತನಿಗೆ ಶಿಕ್ಷೆಯಾಗಲಿ ಎಂಬ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೌರಮ್ಮಳ ಮೃತ ದೇಹವನ್ನು ನೋಡಲು ಆಕೆ ವಾಸವಿದ್ದ ಮನೆಗೂ ಹೋಗಿರುವುದಿಲ್ಲ, ಆಸ್ಪತ್ರೆಯ ಶವಾಗಾರಕ್ಕೆ ಹೋಗಿರುವುದಿಲ್ಲ, ಆದ ಕಾರಣ ನನ್ನ ಹೇಳಿಕೆಯಲ್ಲಿ ನನ್ನ ರುಜುವಿಲ್ಲ ಹಾಗೂ ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ರವಿಕುಮಾರನೆ ಮೃತಳ ತಂದೆ-ತಾಯಿಯ ಅವಶ್ಯಕತೆಗಳಿಗೆ ಹಣ ನೀಡುತ್ತಿದ್ದ ಎಂದರೆ ಸರಿಯಲ್ಲ. ಗೌರಮ್ಮ ತೀರಿಕೊಂಡ ನಂತರ ಆರೋಪಿ ರವಿಕುಮಾರ ಅವರನ್ನು ನೋಡಿಕೊಳ್ಳುವುದಿಲ್ಲ ಎಂದು ಆತನ ಮೇಲೆ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ, ನಾನು ಸುಳ್ಳು ಪ್ರಕರಣ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.